## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ: LP.No. Ad.Com/WST/0351/16-17

ಸಹಾಯಕ ನಿರ್ದೇಶಕರವರ ಕಛೇರಿ,
ನಗರ ಯೋಜನೆ (ಪಶ್ಚಿಮ)
... ಪಾರ್ಕ್, ಶೇಷಾದ್ರಿಪುರಂ,
ಬೆಂಗಳೂರು, ದಿನಾಂಕ: 13/03/2017

ಅನುಸೂಚಿ-(VII)
(ಉಪವಿಧಿ ಸಂಖ್ಯೆ: 5.3)
**"ಪ್ರಾರಂಭಿಕ ಪ್ರಮಾಣ ಪತ್ರ"**

ವಿಷಯ:- ಸ್ವತ್ತಿನ ಸಂಖ್ಯೆ: 106, ಡಾಲರ್ಸ್ ಸ್ಕೀಮ್, ನಂದಿನಿ ಲೇಔಟ್, ಹೊಸ ವಾರ್ಡ್ ಸಂಖ್ಯೆ-44, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:- 1) ನಕ್ಷೆ ಮಂಜೂರಾತಿ ಸಂಖ್ಯೆ: Ad.Com/WST/0351/16-17, ದಿನಾಂಕ: 09/11/2016
2) ಅರ್ಜಿದಾರರ ಮನವಿ ದಿನಾಂಕ: 15/02/2017.
3) ದಿನಾಂಕ: 09/03/2017 ರ ನಕ್ಷೆ ಮಂಜೂರಾತಿ ಸಮಿತಿ ಸಭೆಯ ನಡವಳಿ.

******

ಸ್ವತ್ತಿನ ಸಂಖ್ಯೆ: 106, ಡಾಲರ್ಸ್ ಸ್ಕೀಮ್, ನಂದಿನಿ ಲೇಔಟ್, ಬೆಂಗಳೂರು ಹೊಸ ವಾರ್ಡ್ ಸಂಖ್ಯೆ-44, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ನೆಲ+ನೆಲ+ಮೇಲಿನ 3 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ.ನಂ. Ad.Com/WST/0351/16-17, ದಿನಾಂಕ: 09/11/2016 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ವಸತಿ ಸಮುಚ್ಚಯ ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ಕಟ್ಟಡದ ಸ್ಥಳವನ್ನು ದಿನಾಂಕ: 06/03/2017 ರಂದು ಸ್ಥಳ ಪರಿಶೀಲಿಸಿದ್ದು, ವಲಯ ನಿಯಮಾವಳಿಯಂತೆ, ಅಗತ್ಯ ಸೆಟ್‌ಬ್ಯಾಕ್‌ಗಳನ್ನು ಬಿಟ್ಟು ಆರ್.ಸಿ.ಸಿ. ಕಂಬಗಳನ್ನು ಅಳವಡಿಸಿರುತ್ತಾರೆ. ಉಲ್ಲೇಖ (3) ರಂತೆ, ಸದರಿ ಸ್ವತ್ತಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಪಶ್ಚಿಮ ವಲಯದ ನಕ್ಷೆ ಮಂಜೂರಾತಿ ಸಮಿತಿಯು ಅನುಮೋದಿಸಿರುವ ಮೇರೆಗೆ, ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 22,000/- (D.D. No.829341, dt:10/03/2017) ಗಳನ್ನು ಅರ್ಜಿದಾರರು ಪಾವತಿಸಿದ್ದು, ಸದರಿ ಮೊತ್ತದ ಡಿ.ಡಿ.ಯನ್ನು ರಸೀತಿ ಸಂಖ್ಯೆ: RE-ifms210-TP/001130, ದಿನಾಂಕ: 13/03/2017 ರಂದು ಸಂದಾಯಿಸಿಕೊಳ್ಳಲಾಗಿದೆ. ಹಾಗೂ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಡಿಸಿ ನೀಡಲಾಗಿದೆ.

1. ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ, ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿಶೀಲನೆಗೆ ಒಳಪಡಿಸತಕ್ಕದ್ದು.
3. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4. ಕಟ್ಟಡ ಕಾಮಗಾರಿ ಸ್ಥಳದಲ್ಲಿ ಮಂಜೂರಾತಿ ನಕ್ಷೆಯನ್ನು ಪ್ರದರ್ಶಿಸತಕ್ಕದ್ದು.

M. N. [signature] 13/3/17
ಸಹಾಯಕ ನಿರ್ದೇಶಕರು
ನಗರ ಯೋಜನೆ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಇವರಿಗೆ:-
ಶಕ್ತಿ ಗೋಲ್ಡನ್ ಹೋಂ ಪ್ರಾಪರ್ಟೀಸ್ ನ ಪಾಲುದಾರರಾದ
ಶ್ರೀ ಡಿ.ಕೆ. ಜಗದೀಶ್ ಮತ್ತು ಶ್ರೀ ಶಶಿಕುಮಾರ್ ಬಿ.ಎಂ
ಸ್ವತ್ತಿನ ಸಂಖ್ಯೆ: 106, ಡಾಲರ್ಸ್ ಸ್ಕೀಮ್,
ನಂದಿನಿ ಲೇಔಟ್, ಬೆಂಗಳೂರು, ಹೊಸ ವಾರ್ಡ್-44.

**ಪ್ರತಿಯನ್ನು:-** ಕಾರ್ಯಪಾಲಕ ಅಭಿಯಂತರರು / ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮಹಾಲಕ್ಷ್ಮೀಪುರ) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.